# ಕತ್ತೆಗೂ ಗಂಡಾಂತರ ಕಾಲ



**ಮನುಷ್ಯನ ಸೌಂದರ್ಯವರ್ಧನೆಗೆ ಕತ್ತೆಗಳನ್ನು ಬಳಸಿಕೊಳ್ಳುವ ಉದ್ಯಮ ವೇಗವಾಗಿ ಬೆಳೆಯುತ್ತಿದೆ. ಕತ್ತೆಗಳನ್ನು ಅಪಹರಿಸುವ, ಕೊಲ್ಲುವ, ಕದ್ದು ಮಾರುವ ಜಾಲವೂ ದೊಡ್ಡದಾಗಿದೆ.**

■ ಡಾ. ಪ್ರೇಮಲತ ಬಿ.

ನಿಷ್ಪ್ರಯೋಜಕರನ್ನು ವಿನಾಕಾರಣ ‘ಕತ್ತೆ’ ಎಂದು ಕರೆವ ಕಾಲವೊಂದಿತ್ತು. ಅದರ ಸೌಂದರ್ಯದ ಬಗ್ಗೆ ಅಂತಹ ವರ್ಣನೆಗಳು ಕೂಡ ಕೇಳಿಬರುವುದಿಲ್ಲ. ಆದರೆ ಈ ಎರಡೂ ಭಾವನೆಗಳನ್ನು ಕೈಬಿಡುವ ಕಾಲ ಇದಾಗಿದೆ. ಏಕೆಂದರೆ, ಕತ್ತೆಗಳಿಂದಲೇ ತಮ್ಮ ಸೌಂದರ್ಯ ಹೆಚ್ಚಿಸಿಕೊಳ್ಳುವ ಕೆಲಸಕ್ಕೆ ಮನುಷ್ಯರು ಕೈಹಾಕಿದ್ದಾರೆ.

ಕತ್ತೆಗಳನ್ನು ತಮ್ಮ ಉದ್ಯೋಗಗಳಿಗೆ ಬಳಸಿಕೊಳ್ಳುವ ಅದೆಷ್ಟೋ ಜನರಿದ್ದಾರೆ ಮತ್ತು ದೇಶಗಳಿವೆ. ಈಜಿಪ್ಟ್ ಅಥವಾ ಆಫ್ರಿಕಾ ದೇಶಗಳಿಗೆ ಹೋದರೆ, ಕತ್ತೆಗಳ ಗಾಡಿಗಳ ಮೇಲೆ ಲಕ್ಷಾಂತರ ಜನರು ವಿವಿಧ ರೀತಿ ಬದುಕು ಕಟ್ಟಿಕೊಂಡಿರುವುದನ್ನು ನೋಡಬಹುದು. ಕತ್ತೆಗಳನ್ನು ನಂಬಿಯೇ ಮಿಲಿಯನ್‌ಗಟ್ಟಲೆ ಜನರು ಜೀವನ ಸಾಗಿಸುತ್ತಿದ್ದಾರೆ. ಆಫ್ರಿಕಾದ ದೇಶಗಳಲ್ಲಿ ಜಗತ್ತಿನ ಎರಡನೇ ಮೂರು ಭಾಗದಷ್ಟು ಅಂದರೆ, 53 ಮಿಲಿಯನ್ ಕತ್ತೆಗಳು ಜನರ ಜೀವನಕ್ಕೆ ಆಧಾರವಾಗಿವೆ.

ಕತ್ತೆಗಳನ್ನು ತಮ್ಮ ಸೌಂದರ್ಯವರ್ಧನೆಗೆ ಬಳಸಿಕೊಳ್ಳುವ ಉದ್ಯಮ ಚೀನಾದಲ್ಲಿ ಬಹು ವೇಗವಾಗಿ ಬೆಳೆಯುತ್ತಿದೆ. ಈ ಬೇಡಿಕೆ ಪೂರೈಸಲು ಬಡ ದೇಶದ ಜನರು ಕತ್ತೆಗಳನ್ನು ಮಾರಿಕೊಳ್ಳುತ್ತಿದ್ದಾರೆ. ಕೆಲವರು, ಬಲುಬೆಲೆ ಮತ್ತು ಬೇಡಿಕೆಯುಳ್ಳ ಕತ್ತೆಗಳನ್ನು ಕದ್ದು ಮಾರುತ್ತಿದ್ದಾರೆ.

ಕತ್ತೆಗಳ ಚರ್ಮದಲ್ಲಿನ ಜಿಲ್ಯಾಟಿನ್ ಬಳಸಿದರೆ ತಾರುಣ್ಯವನ್ನು ಬಹುಕಾಲ ಕಾಪಾಡಿಕೊಳ್ಳಬಹುದು ಎಂಬ ಹೊಸ ಉದ್ಯಮವೊಂದು ಶುರುವಾಗಿರುವ ಕಾರಣ ಅವುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಕತ್ತೆಗಳನ್ನು ಕೊಂದು, ಚರ್ಮ ಸುಲಿದು, ಅದನ್ನು ಕುದಿಸಿ, ಜಿಲ್ಯಾಟಿನ್ ಬೇರ್ಪಡಿಸಿ, ಅವನ್ನು ಔಷಧ, ಮಾತ್ರೆ ಅಥವಾ ತಿನಿಸುಗಳಲ್ಲಿ ಸೇರಿಸಿ ಮಾರಲಾಗುತ್ತಿದೆ.

ನಿರಾಶ್ರಿತ ಕತ್ತೆಗಳನ್ನು ನೋಡಿಕೊಳ್ಳುವ ‘ಡಾಂಕಿ ಸಾಂಕ್ಚುವರಿ’ಯ ಅಂದಾಜಿನ ಪ್ರಕಾರ ವರ್ಷಕ್ಕೆ 5.9 ಮಿಲಿಯನ್ ಕತ್ತೆಗಳ ಮಾರಣಹೋಮ ಮಾಡಲಾಗುತ್ತಿದೆ. ಮನುಷ್ಯರ ಸೌಂದರ್ಯ ವರ್ಧಿಸಲು ಇದೇ ವೇಗದಲ್ಲಿ ಕತ್ತೆಗಳು ಬಲಿಯಾದರೆ, ಅವುಗಳ ಸಂತತಿಯೇ ಇಲ್ಲವಾಗುತ್ತದೆ ಎಂಬ ಕಾಳಜಿ ಈಗ ದೊಡ್ಡದಾಗಿ ಕೇಳುತ್ತಿದೆ. ಕಾರಣ, ಕತ್ತೆಗಳ ಸಂತಾನವರ್ಧನೆ ಅತ್ಯಂತ ನಿಧಾನವಾಗಿ ನಡೆಯುವ ಕ್ರಿಯೆ. ಕೊಂದಷ್ಟೇ ವೇಗವಾಗಿ ಅವುಗಳನ್ನು ಬೆಳೆಸುವುದು ಅಸಾಧ್ಯ.

ಉದಾಹರಣೆಗೆ, ಮೂರು ವರ್ಷಗಳಲ್ಲಿ, ಅಂದರೆ 2016ರಿಂದ 2019ರವರೆಗೆ ಕೆನ್ಯಾದ ಅರ್ಧ ಕತ್ತೆಗಳನ್ನು ಈ ರೀತಿ ಕೊಲೆ ಮಾಡಲಾಗಿದೆ. ಆಫ್ರಿಕಾ ಯೂನಿಯನ್ ಸಮ್ಮಿಟ್‌ನಲ್ಲಿ ಕತ್ತೆಗಳ ರಫ್ತನ್ನು ಅನಿರ್ದಿಷ್ಟ ಕಾಲ ಸ್ಥಗಿತಗೊಳಿಸಿ ಎಂಬ ಮನವಿ ಮಂಡಿಸಲಾಗಿದೆ. ಚೀನಾದ ಕತ್ತೆಗಳ ಸಂಖ್ಯೆ ಅತ್ಯಂತ ವೇಗದಲ್ಲಿ ಕುಸಿಯತೊಡಗಿದ ಕೂಡಲೇ, ಆಫ್ರಿಕಾ ಮತ್ತು ಬ್ರೆಜಿಲ್ ದೇಶಗಳಿಂದ ಕತ್ತೆಗಳ ಚರ್ಮವನ್ನು ಆಮದು ಮಾಡಿಕೊಳ್ಳುತ್ತಿದೆ. ಪಾಕಿಸ್ತಾನವೂ ಕತ್ತೆಗಳ ಚರ್ಮವನ್ನು ಕಳಿಸುತ್ತಿದೆ.

ಇಥಿಯೋಪಿಯಾ ದೇಶದಲ್ಲಿ ಜನರು ದಂಗೆಯೆದ್ದು ಇದ್ದ ಎರಡು ಕಸಾಯಿಖಾನೆಗಳನ್ನು 2017ರಲ್ಲಿ ಮುಚ್ಚಿಸಿದ್ದಾರೆ. ಕತ್ತೆಯ ಮಾಂಸ ತಿನ್ನುವುದನ್ನು ನಿಲ್ಲಿಸಲಾಗಿದೆ. ತಾಂಜೇನಿಯಾ ಮತ್ತು ಐವರಿ ಕೋಸ್ಟ್‌ಗಳು ಕೂಡ ಇವೇ ಕ್ರಮಗಳನ್ನು ಅನುಸರಿಸಿವೆ. ಪ್ರಾಣಿ ಮತ್ತು ಅವುಗಳ ಅಂಗಗಳನ್ನು ಮಾರಲು ನಿಷೇಧವಿರುವ ದೇಶಗಳೂ ಈ ವ್ಯಾಪಾರದಲ್ಲಿ ತೊಡಗಿವೆ. ಇಂತಹ ರಾಕ್ಷಸೀ ಉದ್ಯಮಕ್ಕೆ ಕತ್ತೆಗಳನ್ನು ಒದಗಿಸಲು ಜನರು ಕಳ್ಳ ಸಾಗಾಣಿಕೆ ದಾರಿಯನ್ನು ಹಿಡಿದಿದ್ದಾರೆ. ಕತ್ತೆಗಳನ್ನು ಅಹೋರಾತ್ರಿ ಅಪಹರಿಸುವ ಜಾಲಗಳು ಕೆಲಸ ಮಾಡುತ್ತಿವೆ.

ಹೀಗಾಗಿ, 2013ರಲ್ಲಿ 3.2 ಮಿಲಿಯನ್ ಅಮೆರಿಕ ಡಾಲರ್ ಬೆಲೆಯಿದ್ದ ಈ ಉದ್ಯಮ 2020ರ ವೇಳೆಗೆ 7.8 ಬಿಲಿಯನ್ ಅಮೆರಿಕನ್ ಡಾಲರ್ ಉದ್ಯಮವಾಗಿ ಬೆಳೆದು ನಿಂತಿದೆ.

ಇದನ್ನು ನಿಲ್ಲಿಸಲು ಅರಿವು ಮೂಡಿಸುವ ವ್ಯಾಪಕ ಕೆಲಸವಾಗಬೇಕಿದೆ. ಇಲ್ಲದಿದ್ದರೆ, ಅವುಗಳ ಸಂಖ್ಯೆ ಅತ್ಯಂತ ವೇಗವಾಗಿ ನಶಿಸಿಹೋಗುತ್ತದೆ. ಅದಕ್ಕೆ ಬದಲಾಗಿ, ಲ್ಯಾಬೊರೇಟರಿಯಲ್ಲಿ ಉತ್ಪಾದಿಸಿದ ಜಿಲ್ಯಾಟಿನ್ ಉತ್ಪನ್ನಗಳನ್ನು ಬಳಸಲು ಕರೆ ನೀಡಲಾಗಿದೆ. ಕತ್ತೆಗೂ ಈಗ ಗಂಡಾಂತರ ಕಾಲ ಬಂದಿದೆ.

ಪ್ರತಿಕ್ರಿಯಿಸಿ: feedback@sudha.co.in